ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗರಸ್ತೆ, ಬೆಂಗಳೂರು**

**ಸಂಖ್ಯೆ: ಸಿ1(2)(5)ಸ್ಥಾನಪನ್ನ ಬಡ್ತಿ-07/2017-18** **ದಿನಾಂಕ: 05-11-2019**

**ಅಧಿಸೂಚನೆ**

**ವಿಷಯ:** ಸರ್ಕಾರಿ ಪ್ರೌಡ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್-2 ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನಗ್ರೂಪ್-ಬಿ ವೃಂದಕ್ಕೆ ಸ್ಥಾನಪನ್ನ ಬಡ್ತಿ ಕುರಿತು ತಾತ್ಕಲಿಕ ಆಧ್ಯತಾ ಪಟ್ಟಿ ಪ್ರಕಟಿಸಿರುವ ಕುರಿತು

**ಉಲ್ಲೇಖ:**-1)ಸರ್ಕಾರದ ಆದೇಶ ಸಂಖ್ಯೆ.ಸಿಆಸುಇ/186/ಎಸ್ಆರ್ಎಸ್:2018 ದಿನಾಂಕ:15.05.2019

2)ನಿರ್ದೇಶಕರು(ಪ್ರೌಢ ಶಿಕ್ಷಣ)ರವರ ದಿನಾಂಕ 17-10-2019ರ ಅಧಿಸೂಚನೆಯಂತೆ ಸಹ ಶಿಕ್ಷಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಿರುವಂತೆ

-------

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಖಾಲಿ ಇರುವ ಗ್ರೂಪ್-ಬಿ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಸ್ಥಾನಪನ್ನಾ ಬಡ್ತಿ ನೀಡುವ ಸಲುವಾಗಿ ಉಲ್ಲೇಖ-2ರಲ್ಲಿ ನಿರ್ದೇಶಕರು [ಪ್ರೌಢ ಶಿಕ್ಷಣ] ರವರು, ಬೆಂಗಳೂರು ವಿಭಾಗ ಮತ್ತು ಮೈಸೂರು ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್-2 ಪ್ರೌಢ ಶಾಲಾ ಶಿಕ್ಷಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ವಿಭಾಗವಾರು ಸಿದ್ದಪಡಿಸಿ ಪ್ರಕಟಿಸಿರುತ್ತಾರೆ.

ಸದರಿಯವರು ಪ್ರಕಟಿಸಿರುವ ಜೇಷ್ಠತಾ ಪಟ್ಟಿಯನ್ನು ಅನುಸರಿಸಿ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳಿಗೆ ವಿಭಾಗವಾರು ಬಡ್ತಿ ನೀಡುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.ಈ ಸಂಬಂಧ ಈ ಪತ್ರದೊಂದಿಗೆ ತಾತ್ಕಾಲಿಕ ಆಧ್ಯತಾ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್ **www.schooleducation.kar.nic.in** ನಲ್ಲಿ ಪ್ರಕಟಿಸಲಾಗಿದೆ.

ಈ ಕಛೇರಿಗೆ ಈಗಾಗಲೇ ಬಡ್ತಿ ಸಂಬಂಧ ಕೆಲವು ಶಿಕ್ಷಕರುಗಳು ಮಾಹಿತಿಗಳನ್ನು ಸಲ್ಲಿಸಿರುವುದನ್ನು ಪರಿಶೀಲಿಸಿದೆ. ಸದರಿ ಮಾಹಿತಿಗಳನ್ನು ಪರಿಶೀಲಿಸಿದಾಗ, **ಕೆಲವು ಶಿಕ್ಷಕರುಗಳು ನೀಡಬೇಕಾದ ಮಾಹಿತಿಗಳನ್ನು ಮಾತ್ರ ತಾತ್ಕಾಲಿಕ ಆಧ್ಯತಾ ಪಟ್ಟಿಯಲ್ಲಿನ ಕಾಲಂ-2ರಲ್ಲಿ ಹೆಚ್.ಆರ್.ಎಂ.ಎಸ್ ನಲ್ಲಿ ನಮೂದಿಸಿರುವಂತೆ ಕೆ.ಜಿ.ಐ.ಡಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು. ಕಾಲಂ-11 ರಲ್ಲಿ ಈಗಾಗಲೇ ಕಾರ್ಯನಿರ್ವಹಣಾ ವರದಿ ಸಲ್ಲಿಸಿರುವ ಶಿಕ್ಷಕರುಗಳನ್ನು ಹೊರತುಪಡಿಸಿ, ಕಾರ್ಯನಿರ್ವಹಣಾ ವರದಿ ಸಲ್ಲಿಸದ ಶಿಕ್ಷಕರ ಮಾಹಿತಿ ನಮೂದಿಸಿದೆ. ಕಾಲಂ-12 ರಲ್ಲಿ ಇಲಾಖಾ ಪರೀಕ್ಷೆ ಉತ್ತೀರ್ಣವಾದ ಬಗ್ಗೆ ಸಲ್ಲಿಸಬೇಕಾದ ಶಿಕ್ಷಕರುಗಳ ಮಾಹಿತಿ ನಮೂದಿಸಿದೆ. ಕಾಲಂ-13 ರಲ್ಲಿ ಕನ್ನಡ ವಿನಾಯಿತಿ ಹಾಗೂ ಹಿಂದಿ ಶಿಕ್ಷಕರಾಗಿದ್ದಲ್ಲಿ ಪಿ.ಯು.ಸಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾದ ಶಿಕ್ಷಕರ ಮಾಹಿತಿ ನಮೂದಿಸಿದೆ.**

ಬಡ್ತಿ ಸಂಬಂಧ ಪ್ರಕಟಿಸಲಾಗಿರುವ ಆಧ್ಯತಾ ಪಟ್ಟಿಯಲ್ಲಿನ ಎಲ್ಲಾ ಪ್ರೌಢ ಶಾಲಾ ಸಹ ಶಿಕ್ಷಕರುಗಳ ಬಗ್ಗೆ **ಶಿಸ್ತಿನ ಕ್ರಮ/ ಇಲಾಖಾ ವಿಚಾರಣೆ ಬಾಕಿ ಇರುವ/ ಇಲ್ಲದ ಬಗ್ಗೆ ವಿವರ ಹಾಗೂ ಕ್ರಿಮಿನಲ್ ಮೊಕದ್ದಮೆ ಬಗ್ಗೆ ಮಾಹಿತಿಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು**..ಮೇಲ್ಕಂಡ ವಿವರಗಳನ್ನು ಲಗತ್ತಿಸಿರುವ ಚೆಕ್ ಲಿಸ್ಟನಲ್ಲಿ ಮಾಹಿತಿಯನ್ನು ನಮೂದಿಸಿದ ಪ್ರಸ್ತಾವನೆಯನ್ನು ಸಂಬಂಧಿಸಿದ ಶಿಕ್ಷಕರುಗಳಿಂದ ಪಡೆದು ಜಿಲ್ಲಾವಾರು ಕ್ರೋಢೀಕರಿಸಿ, ಪ್ರತಿ ಶಿಕ್ಷಕರ ಬಡ್ತಿ ಪ್ರಸ್ತಾವನೆಯನ್ನು ಪ್ರತ್ಯೇಕ ಡೋಸಿಯರ್‌ಗಳಲ್ಲಿ ಸಿದ್ದಪಡಿಸಿ ಉಪನಿರ್ದೇಶಕರ (ಆಡಳಿತ) ದೃಢೀಕರಣದೊಂದಿಗೆ ಈ ಕಛೇರಿಗೆ **ದಿನಾಂಕ:20-11-2019 ರೊಳಗಾಗಿ ಕಡ್ಡಾಯವಾಗಿ ಖುದ್ದು ಸಲ್ಲಿಸತಕ್ಕದ್ದು**

[ಅರುಳ್‌ಕುಮಾರ್]

ಜಂಟಿನಿರ್ದೇಶಕರು(ಆಡಳಿತ)

ಇವರಿಗೆ,

ಬೆಂಗಳೂರು/ಮೈಸೂರು ವಿಭಾಗದ ಉಪನಿರ್ದೇಶಕರು(ಆಡಳಿತ )

**ಪ್ರತಿಯನ್ನು:-**

1) ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ/ಆರ್.ಎಂ.ಎಸ್.ಎ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3
2) ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ,ಬೆಂಗಳೂರು

[ಮುಂದುವರೆದಿದೆ......]

3) ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕ ಸಂಘ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ,ಬೆಂಗಳೂರು
4) ನಿರ್ದೇಶಕರು(ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು
5) ನಿರ್ದೇಶಕರು, ಭಾಷಾ ಅಲ್ಪಸಂಖ್ಯಾತ ನಿರ್ದೇಶನಾಲಯ, ಆಯುಕ್ತರ ಕಛೇರಿ, ಬೆಂಗಳೂರು
6) ನಿರ್ದೇಶಕರು(ಪ್ರಾ.ಶಿ) ಆಯುಕ್ತರ ಕಛೇರಿ, ಬೆಂಗಳೂರು
7) ಸಹ ನಿರ್ದೇಶಕರು ಬೆಂಗಳೂರು ವಿಭಾಗ ಮತ್ತು ಮೈಸೂರು ವಿಭಾಗ
8) ಸಹ ನಿರ್ದೇಶಕರು, ಮದ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು
9) ಸಹ ನಿರ್ದೇಶಕರು, ಸರ್ಕಾರಿ ಹಿಂದಿ ಬಿ.ಇಡಿ, ಕಾಲೇಜು, ಮೈಸೂರು
10) ಪ್ರಾಂಶುಪಾಲರು, ಸಿ.ಟಿ.ಇ, ಮೈಸೂರು
11) ಬೆಂಗಳೂರು/ಮೈಸೂರು ವಿಭಾಗದ ಉಪನಿರ್ದೇಶಕರು(ಅಭಿವೃದ್ಧಿ)
12) ಉಪನಿರ್ದೇಶಕರು, ಕೆ.ಎಸ್.ಕ್ಯೂ.ಎ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3
13) ಕಛೇರಿ ಪ್ರತಿ